ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67
ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ **57**)
ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಸಿಂಧನೂರು.**
**ಸಿ.ಸಿ.ನಂ. 1120/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಶೋಧಾ ಮಂಡಲ್ | | |
| ತಂದೆಃಹೆಸರು | ಪ್ರಶಾಂತ್ ಮಂಡಲ್ | ಪಿಡಬ್ಲೂಃ | **05** |
| ವಯಸ್ಸು | **30** ವರ್ಷ | ಸಿಡಬ್ಲೂಃ | **02** |
| ಉದ್ಯೋಗಃ | ಹೂವಿನ ವ್ಯಾಪಾರ | | |
| ವಾಸ ಸ್ಥಳಃ | ಬೆಂಗಳೂರು | | |

ದಿನಾಂಕ 21-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ-**

ಈ ಹಂತದಲ್ಲಿ ಸಾಕ್ಷಿಯು ಕನ್ನಡ ಭಾಷೆ ಅಷ್ಟೋಂದು ಬರುವದಿಲ್ಲ, ಹಿಂದಿ ಭಾಷೆ ಬರುತ್ತದೆ ಎಂದು ತಿಳಿಸಿದ್ದರಿಂದ ಶ್ರೀ ಹೆಚ್. ಕೆ.ಜಿ. ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಿ, ಅವರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಗೆ ನಿಪಿ-3 ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನ ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ-3 ಬಿ ಎಂದು ಗುರುತಿಸಲಾಯಿತು.

2018 ರಲ್ಲಿ ಚಾಸಾ-1 ರವರ ಮನೆಯ ಹತ್ತಿರ ಪೊಲೀಸರು ಬಂದಿದ್ದರು, ಪಂಚನಾಮೆಯನ್ನು ಮಾಡಿದ್ದರು, ನಾನು ಸಹಿ ಹಾಕಿದ್ದೆ. ಅದರಲ್ಲಿ ಏನು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ದಿಃ 19.08.2018 ರಂದು ಬೆ. 9 ರಿಂದ 10 ಗಂಟೆಯವರೆಗೆ ನಿಮ್ಮ ಮತ್ತ ಚಾಸಾ-3 ರವರ ಸಮಕ್ಷಮ ಆರ್ ಹೆಚ್ ನಂ.2 ರ ಚಾಸಾ-1 ಮತ್ತು ಆರೋಪಿಯ ಮನೆಗೆ ಹೋಗುವ ದಾರಿಯಲ್ಲಿ ಪಂಚನಾಮೆ ಮಾಡಿದ್ದರು ಎಂದರೆ ಸರಿ. ನಿಪಿ-3 ರಲ್ಲಿರುವ ಸಂಗತಿಗಳನ್ನು ನನಗೆ ಓದಿ ಹೇಳಿಲ್ಲ ಎಂದರೆ ಸರಿ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-ಇಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.